# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | (738) |
| ವಿಧಾನ ಪರಿಷತ್ತು ಸದಸ್ಯರು | ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 12.03.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೊಪ್ಪಳ ಜಿಲ್ಲೆಯಲ್ಲಿ ಪೋಡಿಗಾಗಿ ಬಾಕಿ ಇರುವ ಅರ್ಜಿಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)</td><td rowspan="2">ಕೊಪ್ಪಳ ಜಿಲ್ಲೆಯಲ್ಲಿ ಪೋಡಿಗಾಗಿ ಬಾಕಿ ಇರುವ ಅರ್ಜಿಗಳ ಸಂಖ್ಯೆ:4233 (ಕಂದಾಯ ಇಲಾಖೆಯಲ್ಲಿ 2273 + ಭೂಮಾಪನ ಇಲಾಖೆಯಲ್ಲಿ 1960) .<br><br>ಕಳೆದ 3 ವರ್ಷಗಳಲ್ಲಿ ಮೊಜಿಣಿ ತಂತ್ರಾಂಶದ ಮೂಲಕ ತತ್ಕಾಲ್ ಪೋಡಿಗಾಗಿ ಸ್ವೀಕೃತವಾದ/ವಿಲೆಯಾದ/ಬಾಕಿ ಇರುವ ಅರ್ಜಿಗಳ ತಾಲ್ಲೂಕುವಾರು ವಿವರ ಕೆಳಕಂಡಂತಿದೆ:-
<table>
<tr><th>ತಾಲ್ಲೂಕು</th><th>ಪ್ರಾ. ಶಿಲ್ಕು</th><th>ಸ್ವೀಕೃತಿ</th><th>ಒಟ್ಟು</th><th>ವಿಲೆ</th><th>ಒಟ್ಟು ಬಾಕಿ</th><th>ಕಂದಾಯ ಇಲಾಖೆಯಲ್ಲಿ ಬಾಕಿ</th><th>ಭೂಮಾಪನ ಇಲಾಖೆಯಲ್ಲಿ ಬಾಕಿ</th></tr>
<tr><td>ಯಲ್ಬುರ್ಗ</td><td>49</td><td>1445</td><td>1494</td><td>1076</td><td>418</td><td>142</td><td>276</td></tr>
<tr><td>ಕುಷ್ಠಗಿ</td><td>169</td><td>1742</td><td>1911</td><td>1315</td><td>596</td><td>342</td><td>254</td></tr>
<tr><td>ಗಂಗಾವತಿ</td><td>362</td><td>885</td><td>1247</td><td>619</td><td>628</td><td>404</td><td>224</td></tr>
<tr><td>ಕೊಪ್ಪಳ</td><td>449</td><td>1677</td><td>2126</td><td>993</td><td>1133</td><td>707</td><td>426</td></tr>
<tr><td>ಕರಟಗಿ</td><td>255</td><td>1015</td><td>1270</td><td>657</td><td>613</td><td>295</td><td>318</td></tr>
<tr><td>ಕುಕನೂರ</td><td>24</td><td>934</td><td>958</td><td>646</td><td>312</td><td>98</td><td>214</td></tr>
<tr><td>ಕನಕಗಿರಿ</td><td>138</td><td>872</td><td>1010</td><td>477</td><td>533</td><td>285</td><td>248</td></tr>
<tr><td>Total</td><td>1446</td><td>8570</td><td>10016</td><td>5783</td><td>4233</td><td>2273</td><td>1960</td></tr>
</table>
ಕೊಪ್ಪಳ ಜಿಲ್ಲೆಯಲ್ಲಿ ಬಾಕಿಯಿರುವ ಒಟ್ಟು 4233 ತತ್ಕಾಲ್ ಪೋಡಿ ಅರ್ಜಿಗಳ ಪೈಕಿ 2273 ಅರ್ಜಿಗಳು ಪಹಣಿ ತಿದ್ದುಪಡಿ (ಆಕಾರಬಂದು,ಪಹಣಿ ವಿಸ್ತೀರ್ಣ ಮತ್ತು ಪಹಣಿ ಕಾಲಂ 3 & 9 ರಲ್ಲಿ ವಿಸ್ತೀರ್ಣದಲ್ಲಿ ವ್ಯತ್ಯಾಸ, ಇತ್ಯಾದಿ) ಮತ್ತು ಭೂಮಂಜೂರಿ ಪ್ರಕರಣಗಳಲ್ಲಿ ಮಂಜೂರಾತಿ ದಾಖಲೆಗಳ ಪರಿಶೀಲನೆ, ಇತ್ಯಾದಿ ಕ್ರಮಕ್ಕಾಗಿ ಕಂದಾಯ ಶಾಖೆಯಲ್ಲಿ ಬಾಕಿಯಿರುತ್ತವೆ.<br>ಉಳಿದಂತೆ, 1960 ಅರ್ಜಿಗಳು ಅಳತೆಗಾಗಿ ಭೂಮಾಪಕರಿಗೆ ಹಂಚಿಕೆ ಮತ್ತು ಅಳತೆ ಹಾಗೂ ಅಳತೆ ನಂತರ ಪರಿಶೀಲನೆಗಾಗಿ ಭೂಮಾಪನ ಶಾಖೆಯಲ್ಲಿ ಬಾಕಿಯಿರುತ್ತವೆ.</td></tr>
<tr><td>ಆ)</td><td>ಕಳೆದ 3 ವರ್ಷ ಗಳಿಂದ ಸಲ್ಲಿಕೆಯಾಗಿರುವ ಅರ್ಜಿಗಳೆಷ್ಟು; ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ; (ಕೊಪ್ಪಳ ಜಿಲ್ಲೆಯ ತಾಲ್ಲೂಕುವಾರು ವಿವರ ನೀಡು ವುದು)</td></tr>
<tr><td>ಇ)</td><td>ಪೋಡಿಗಾಗಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಇತ್ಯರ್ಥ ಪಡಿಸಲು ಕಾಲಮಿತಿ ಇದೆಯೇ; ಕಾಲಮಿತಿಯೊಳಗೆ ಅರ್ಜಿ ಗಳನ್ನು ವಿಲೇವಾರಿ ಮಾಡದ ಎಷ್ಟು ಜನ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು)</td><td>ಪ್ರಸ್ತುತ ಭೂಮಾಪನ ಇಲಾಖೆಯಲ್ಲಿ ತತ್ಕಾಲ್ ಪೋಡಿ ಅಳತೆ ಕೋರಿ ಸಲ್ಲಿಕೆಯಾಗುವ ಅರ್ಜಿಯಲ್ಲಿ ಯಾವುದೇ ಸಮಸ್ಯೆಗಳಿಲ್ಲದೆ ನಿಯಮಾನುಸಾರ ಅಳತೆಗೆ ಯೋಗ್ಯವಿದ್ದಲ್ಲಿ ಮತ್ತು ಯಾವುದೇ ತಕರಾರು ಇಲ್ಲದಿರುವ ಅರ್ಜಿ ಗಳನ್ನು 30 ರಿಂದ 45 ದಿನಗಳಲ್ಲಿ ವಿಲೇವಾರಿ ಮಾಡಲಾಗುತ್ತಿದೆ.<br><br>ಭೂಮಾಪನ ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ರೀತಿಯ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್‌ಲೈನ್‌ನಲ್ಲಿ ಸ್ವೀಕರಿಸಲಾಗುತ್ತಿದ್ದು, ಮೋಜಿಣಿ ತಂತ್ರಾಂಶದ ಮೂಲಕವೇ ಅಳತೆಗಾಗಿ ಹಂಚಿಕೆ, ಅಳತೆಯಾದ ನಂತರ ಕಡತ ಅಪ್‌ಲೋಡ್, ಪರಿಶೀಲನೆ ಮತ್ತು ಅನುಮೋದನೆಯನ್ನು ಸಹಾ ತಂತ್ರಾಂಶದ ಮುಖಾಂತರ ಆನ್‌ಲೈನ್‌ನಲ್ಲೇ ಸರದಿ ಸಾಲಿನಂತೆ ನಿರ್ವಹಿಸುವ ಮೂಲಕ, ಪ್ರಕರಣಗಳ ವಿಲೆವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮ ವಹಿಸಲಾಗುತ್ತಿದೆ.</td></tr>
</table>

| | | |
|---|---|---|
| | | ಆದಾಗ್ಯೂ, ಅಧಿಕಾರಿ/ನೌಕರರು ತತ್ಕಾಲ್ ಪೋಡಿ ಅರ್ಜಿ ವಿಲೆವಾರಿಯನ್ನು ಉದ್ದೇಶ ಪೂರ್ವಕವಾಗಿ ವಿಳಂಬ ಮಾಡಿರುವ/ಮಾಡುತ್ತಿರುವ ಬಗ್ಗೆ ನಿರ್ದಿಷ್ಟ ದೂರುಗಳು ಸ್ವೀಕೃತ ವಾದಲ್ಲಿ ತಕ್ಷಣ ಸಂಬಂಧಿಸಿದ ಪ್ರಾದೇಶಿಕ ಭೂದಾಖಲೆಗಳ ಜಂಟಿ ನಿರ್ದೇಶಕರು/ ಭೂದಾಖಲೆಗಳ ಉಪ ನಿರ್ದೇಶಕರುಗಳಿಂದ ವರದಿ ಪಡೆದು, ಇಲಾಖಾ ವಿಚಾರಣೆಯನ್ನು ನಡೆಸಿ, ತಪ್ಪಿತಸ್ಥ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು. |
| ಈ) | ಪೋಡಿಗಾಗಿ ಬಾಕಿ ಇರುವ ಅರ್ಜಿಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? | ಬಾಕಿಯಿರುವ ತತ್ಕಾಲ್ ಪೋಡಿ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳು ಈ ಕೆಳಗಿನಂತಿವೆ:-<br><br>1. ಬಾಕಿ ಅರ್ಜಿಗಳ ಶೀಘ್ರ ವಿಲೇವಾರಿ ಕುರಿತು ಕಳೆದ ವರ್ಷ ಇಲಾಖೆಯು 1227 ಜನ ಹೆಚ್ಚಿನ ಪರವಾನಗಿ ಭೂಮಾಪಕರನ್ನು ಆಯ್ಕೆ ಮಾಡಿಕೊಂಡು ತರಬೇತಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ಕಾರ್ಯ ನಿಯೋಜನೆ ಮಾಡಲಾಗಿದೆ. ಅದರಂತೆ, ಕೊಪ್ಪಳ ಜಿಲ್ಲೆ ವ್ಯಾಪ್ತಿಗೆ 24 ಜನ ಪರವಾನಗಿ ಭೂಮಾಪಕರನ್ನು ನಿಯೋಜಿಸಲಾಗಿದೆ.<br>2. ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್‌ಲೈನ್‌ನಲ್ಲಿ ಸ್ವೀಕರಿಸಲಾಗುತ್ತಿದ್ದು, ಮೋಜಿಣಿ, ತಂತ್ರಾಂಶದ ಮೂಲಕವೇ ಅಳತೆಗಾಗಿ ಭೂಮಾಪಕರಿಗೆ ಹಂಚಿಕೆ, ಅಳತೆಯಾದ ನಂತರ ಕಡತಗಳನ್ನು ಅಪ್‌ಲೋಡ್ ಹಾಗೂ ಅಪ್‌ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹಾ ತಂತ್ರಾಂಶದ ಮುಖಾಂತರ ಆನ್ ಲೈನ್‌ನಲ್ಲೇ ಸರದಿ ಸಾಲಿನಂತೆ ನಿರ್ವಹಿಸುವ ಮೂಲಕ, ಪ್ರಕರಣ ಗಳ ವಿಲೇವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮವಹಿಸಲಾಗುತ್ತಿದೆ.<br>3. ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.<br>4. ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>5. 750 ಭೂಮಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಅರ್ಜಿ ಆಹ್ವಾನಿಸಿದ್ದು, ಸ್ವೀಕೃತವಾಗಿರುವ ಅರ್ಜಿಗಳ ಪರಿಶೀಲನೆ ಕಾರ್ಯ ಪ್ರಗತಿಯಲ್ಲಿದೆ. ಅರ್ಹ ಅಭ್ಯರ್ಥಿಗಳ ಆಯ್ಕೆ ನಂತರ ಆದ್ಯತೆ ಮೇರೆಗೆ ಕೊಪ್ಪಳ ಜಿಲ್ಲೆ ವ್ಯಾಪ್ತಿಗೆ ಹೆಚ್ಚಿನ ಸರ್ಕಾರಿ ಭೂಮಾಪಕರನ್ನು ನಿಯೋಜಿಸಲು ಕ್ರಮ ಕೈಗೊಳ್ಳಲಾಗುವುದು.<br>6. 1000 ಪರವಾನಗಿ ಭೂಮಾಪಕರ ಆಯ್ಕೆಗೆ ಉದ್ದೇಶಿಸಲಾಗಿದ್ದು, ಪ್ರಸ್ತಾವನೆಯು ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆಗಾಗಿ ಬಾಕಿ ಇರುತ್ತದೆ. ಆರ್ಥಿಕ ಇಲಾಖೆಯ ಅನುಮೊದನೆ ದೊರೆತ ಕೂಡಲೇ ಹೆಚ್ಚಿನ 1000 ಪರವಾನಗಿ ಭೂಮಾಪಕರ ಆಯ್ಕೆಮಾಡಿಕೊಂಡು ಆದ್ಯತೆ ಮೇರೆಗೆ ಕೊಪ್ಪಳ ಜಿಲ್ಲೆ ವ್ಯಾಪ್ತಿಗೆ ಹೆಚ್ಚಿನ ಪರವಾನಗಿ ಭೂಮಾಪಕರನ್ನು ನಿಯೋಜಿಸಲು ಕ್ರಮ ಕೈಗೊಳ್ಳಲಾಗುತ್ತದೆ. |

**ಸಂಖ್ಯೆ: ಕಂಇ 38 ಎಸ್‌ಎಸ್‌ಸಿ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು